**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 29-02-2024.**

**ಮುಂದುವರೆದ ಪಾಟೀ ಸವಾಲು - ವಾದಿ ಪರ ವಕೀಲರಿಂದ :**

**1)** 1990 ರಲ್ಲಿ ನಾನು ಹೇಳುವ ವಿಭಾಗ ಪತ್ರದ ಪ್ರಕಾರ ಯಾವುದೇ ಕಂದಾಯ ದಾಖಲೆಗಳು ಬದಲಾವಣೆ ಆಗಿರಲಿಲ್ಲ. ಎಂ.ಆರ್.ಸಂಖ್ಯೆ 12/1995-96 ರ ಪ್ರಕಾರ ಯಾವುದೇ ಪಹಣಿ ಪತ್ರಿಕೆಗಳು ನಮ್ಮ ಹೆಸರಿಗೆ ಬದಲಾಣೆ ಆಗಿರುವುದಿಲ್ಲ, 1 ನೇ ಪ್ರತಿವಾದಿಯ ಹೆಸರಿನಲ್ಲಿ ಮುಂದುವರೆದಿರುತ್ತವೆ ಎಂದರೆ ಸರಿಯಲ್ಲ. 2005 ನೇ ಸಾಲಿನವರೆಗೂ ಎಲ್ಲಾ ದಾಖಲೆಗಳು ನಮ್ಮ ತಂದೆ ನಾರಾಯಣಪ್ಪ ಅವರ ಹೆಸರಿನಲ್ಲಿ ಇದ್ದವು ಎಂದರೆ ಸರಿಯಲ್ಲ. ನಾರಾಯಣಪ್ಪ ಅವರ ಎಲ್ಲಾ ಮಕ್ಕಳು ಸದರಿ ಸ್ವತ್ತುಗಳನ್ನು ಸಮಾನ ಹಕ್ಕು ಮತ್ತು ಸ್ವಾ ಧೀನದೊಂದಿಗೆ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ 1990 ರ ವಿಭಾಗ ಪತ್ರದ ಪ್ರಕಾರ ಯಾರು ಯಾರಿಗೆ ಯಾವ ಯಾವ ಜಮೀನು ಹೋಗಿದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿ ಎಂ.ಆರ್.12/1995-96 ರ ಪ್ರಕಾರ ಖಾತೆಯಾಗಿದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ನಾನು ಹೇಳುವ ಹಾಗೆ 1990 ರಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ ಹಾಗೂ 1994-95 ರಲ್ಲಿ ಖಾತೆ ಬದಲಾವಣೆ ಆಗಿರುವುದಿಲ್ಲ ಹಾಗೂ ನಾರಾಯಣಪ್ಪ ಅವರ ಎಲ್ಲಾ ಮಕ್ಕಳು ದಾವಾ ಸ್ವತ್ತುಗಳ ಹಕ್ಕು ಮತ್ತು ಸ್ವಾಧೀನವನ್ನು ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಹಳೇ ದಾಖಲೆಗಳನ್ನು ತೋರಿಸಿ 2005-06 ರಲ್ಲಿ ಪಹಣಿ ಪತ್ರಿಕೆಗಳನ್ನು ಬದಲಾವಣೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 4 ನೇ ಪ್ರತಿವಾದಿ 2012 ರಲ್ಲಿ 2 ನೇ ಪ್ರತಿವಾದಿ ನಮ್ಮ ತಂದೆಯ ಹೆಬ್ಬೆರಳ ಗುರುತುಗಳನ್ನು ಪಡೆದು ಸುಳ್ಳು ದಾಖಲೆಗಳನ್ನು ಸೃಷ್ಟಿಸುತ್ತಿದ್ದಾರೆ ಎಂದು ಹೇಳಿ ಮಧ್ಯಂತರ ಅರ್ಜಿ ಸಲ್ಲಿಸಿ ನಮ್ಮ ಲಿಖಿತ ಹೇಳಿಕೆಯನ್ನು ತಿದ್ದುಪಡಿ ಮಾಡಿಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮಲ್ಲಿ ವಿಭಾಗ ಆಗದ ಕಾರಣ 2 ನೇ ಪ್ರತಿವಾದಿ ಉಳಿದ ಸಹೋದರ ಸಹೋದರಿಯರಿಗೆ ಗೊತ್ತಾಗದ ಹಾಗೆ ದಾಖಲೆಗಳನ್ನು ಮಾಡಿಕೊಳ್ಳಲು ಪ್ರಯತ್ನಿಸಿದರು ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಲಿಖಿತ ಹೇಳಿಕೆಯ ತಿದ್ದುಪಡಿಗೆ ಅರ್ಜಿ

ಸಲ್ಲಿಸಿದ್ದು, ಈಗ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿ.30-05-2016 ರಲ್ಲಿ ಸರ್ವೆ ಸಂಖ್ಯೆ 36-3 ಡಿ ರಲ್ಲಿ 17 ಗುಂಟೆ ಜಮೀನನ್ನು ನನ್ನ ಮಗ ಭಾಸ್ಕರ್ ಅವರಿಗೆ ದಾನಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ಅದೇ ರೀತಿ 4 ನೇ ಪ್ರತಿವಾದಿಯೂ ಸಹ ಅದೇ ದಿನ ಸರ್ವೆ ಸಂಖ್ಯೆ 56-3 ಎ ರಲ್ಲಿ 20 ಗುಂಟೆ ಜಮೀನಿನ ಬಗ್ಗೆ ಅವರ ಮಗ ಆರ್.ಕೌಶಿಕ್ ಅವರಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಸದರಿ ಸ್ವತ್ತುಗಳು ಈ ದಾವೆಯ ದಾವಾ ಸ್ವತ್ತುಗಳಾಗಿದ್ದವು ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿರುವಾಗ ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 4 ನೇ ಪ್ರತಿವಾದಿ ನಮ್ಮ ಮಕ್ಕಳಿಗೆ ಸದರಿ ದಾಖಲೆಗಳನ್ನು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಒಬ್ಬ ಮಗ ಮತ್ತು ಒಬ್ಬಳು ಮಗಳು ಇರುತ್ತಾರೆ. ಉದ್ದೇಶಪೂರ್ವಕವಾಗಿ ಹೆಣ್ಣು ಮಕ್ಕಳ ಹಕ್ಕನ್ನು ತಪ್ಪಿಸುವ ಉದ್ದೇಶದಿಂದ ನಾವು ಸುಳ್ಳು ದಾನಪತ್ರ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ದಾವೆಯ 8 ನೇ ಪ್ರತಿವಾದಿ ಸರ್ವೆ ಸಂಖ್ಯೆ 35 ರ ಜಮೀನು ತಮ್ಮದು ಎಂದು ತಾವೇ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತು ಪೋಡಿಯಾಗಿ ಸರ್ವೆ ಸಂಖ್ಯೆ 78 ಆಗಿದೆ ಎಂದರೆ ಸರಿ. ಸದರಿ ಸ್ವತ್ತು ನಮ್ಮ ಕುಟುಂಬದ ಸ್ವಾಧೀನದಲ್ಲಿ ಇದೆ ಎಂದರೆ 2 ರಿಂದ 5 ನೇ ಪ್ರತಿವಾದಿಗಳ ಸ್ವಾಧೀನದಲ್ಲಿ ಇದೆ ಎಂದು ನುಡಿಯುತ್ತೇನೆ. ಸದರಿ ಸ್ವತ್ತು ನಮ್ಮ ತಂದೆ 1964 ರಲ್ಲಿ ಕ್ರಯಪತ್ರದ ಮೂಲಕ ಖರೀದಿಸಿದ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತಿನ ಮೂಲ ಸರ್ವೆ ಸಂಖ್ಯೆ 35-1 ಆಗಿದ್ದು ತದನಂತರ ಸರ್ವೆ ಸಂಖ್ಯೆ 78 ಆಗಿರುತ್ತದೆ ಎಂದರೆ ಸರಿ. 8 ನೇ ಪ್ರತಿವಾದಿ ಸದರಿ ಸ್ವತ್ತು ತಮ್ಮ ತಂದೆಯಿಂದ ತನಗೆ ಬಂದಿರುತ್ತದೆ ಎಂದು ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ವಾಸ್ತವವಾಗಿ 8 ನೇ ಪ್ರತಿವಾದಿಯ ಸ್ವತ್ತು ಸರ್ವೆ ಸಂಖ್ಯೆ 35-6 ಆಗಿದ್ದು, ಸದರಿ ಸ್ವತ್ತು ಹಾಗೂ ನಮ್ಮ ಸ್ವತ್ತು ಬೇರೆ ಬೇರೆ ಎಂದರೇ ಸರಿ. ನಮ್ಮ ಸ್ವತ್ತಿನಿಂದ 8 ನೇ ಪ್ರತಿವಾದಿಯ ಸ್ವತ್ತು ದೂರ ಇದೆ ಎಂದರೆ ಸರಿ. ನಮ್ಮ ಸ್ವತ್ತಿನ ಚೆಕ್ಕುಬಂದಿ ಹಾಗೂ 8 ನೇ ಪ್ರತಿವಾದಿಯ ಸ್ವತ್ತಿನ ಚೆಕ್ಕುಬಂದಿ ಬೇರೆ ಬೇರೆ ಎಂದರೆ ಸರಿ. 8 ನೇ ಪ್ರತಿವಾದಿ ಅಅವರ ಸ್ವತ್ತಿನ ಪೋಡಿ ಮಾಡಿಕೊಳ್ಳಲು ಸಾಧ್ಯವಾಗದೇ ನಮ್ಮ ಸ್ವತ್ತನ್ನು ತಮ್ಮ ಸ್ವತ್ತು

ಎಂದು ಹೇಳುತ್ತಿದ್ದಾರೆ ಎಂದರೆ ಸರಿ. ಆ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ. ವಾಸ್ತವವಾಗಿ ಹಳೇ ಸರ್ವೆ ಸಂಖ್ಯೆ 35-1 ಹೊಸ ಸರ್ವೆ ಸಂಖ್ಯೆ 78 ಈವತ್ತಿಗೂ 1 ನೇ ಪ್ರತಿವಾದಿಯ ಕುಟುಂಬದಲ್ಲೇ ಇದೆ ಎಂದರೆ ಸರಿ. ಈ ದಾವೆ ಸಲ್ಲಿಸುವಾಗ 1 ನೇ ಪ್ರತಿವಾದಿ ಜೀವಂತ ಇದ್ದರು. ಈ ದಾವೆ ಚಾಲ್ತಿಯಲ್ಲಿರುವಾಗ ಅನೇಕ ಬಾರಿ ನಮ್ಮ ತಂದೆ ನಮ್ಮನ್ನು ಕರೆದು ಹೆಣ್ಣು ಮಕ್ಕಳಿಗೆ ಸೇರತಕ್ಕ ಆಸ್ತಿಯನ್ನು ಕೊಡಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆದರೂ ಸಹ ನಾವು ಅವರ ಮಾತನ್ನು ಕೇಳದೇ ಸುಳ್ಳು ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ನಿ.ಡಿ.94 ರಿಂದ ನಿ.ಡಿ.96 ನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಬರುವ ಆದಾಯದಲ್ಲಿ ಯಾವುದೇ ಭಾಗವನ್ನು ನಾವು ವಾದಿಗಳಿಗೆ ನೀಡಿರುವುದಿಲ್ಲ ಎಂದರೆ ವಿಭಾಗ ಆದಾಗಿನಿಂದ ನೀಡಿರುವುದಿಲ್ಲ ಎಂದು ನುಡಿಯುತ್ತೇನೆ. ನಾವು 1 ರಿಂದ 3 ನೇ ವಾದಿಗಳು ಹಾಗೂ 6 ನೇ ಪ್ರತಿವಾದಿಗೆ ಸಮಾನ ಭಾಗವನ್ನು ನೀಡಬೇಕು ಹಾಗೂ ದಾವಾಸ್ವತ್ತುಗಳ ಉತ್ಪತ್ತಿಯಲ್ಲಿ ಪಾಲನ್ನೂ ಸಹ ನೀಡಬೇಕು ಎಂದರೆ ಸರಿಯಲ್ಲ. ನಾವು ಹೆಣ್ಣು ಮಕ್ಕಳ ಭಾಗವನ್ನು ಕಸಿದುಕೊಂಡು ನಾವೇ ಅನುಭವಿಸಬೇಕು ಎಂಬ ಉದ್ದೇಶದಿಂದ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**